# ಒಲಿಯದೇಕೆ ಸಂತಾನಭಾಗ್ಯ...?

## ಆರೋಗ್ಯ ಕಬಳಿಸುತ್ತಿರುವ ಪರಿಸರದ ಕಲ್ಮಶ

**ಸಂತಾನೋತ್ಪತ್ತಿ ಸಾಮರ್ಥ್ಯ ಕುಂಠಿತಗೊಳ್ಳಲು ಕಲುಶಿತ ಪರಿಸರವೂ ಪ್ರಮುಖ ಕಾರಣ ಎಂಬುದು ಅಧ್ಯಯನದಿಂದ ಸಾಬೀತಾಗಿದೆ. ಹಾನಿಕಾರಕ ಪ್ಲಾಸ್ಟಿಕ್, ಕಲುಶಿತ ನೀರು, ವಿಷಯುಕ್ತ ಸೌಂದರ್ಯವರ್ಧಕಗಳನ್ನು ಬಳಸುವುದರಿಂದ ಸ್ತ್ರೀ–ಪುರುಷರಲ್ಲಿ ಫಲವತ್ತತೆ ಸಮಸ್ಯೆ ಹೆಚ್ಚಾಗುತ್ತಿದೆ ಎಂಬುದು ಕಳವಳಕಾರಿ ವಿಚಾರ.**

**■ ಡಾ. ವೀಣಾ ಭಟ್, ಭದ್ರಾವತಿ**

‘ನಮ್ಮ ಮಗಳಿಗೆ ಮದುವೆ ಆಗಿ ನಾಲ್ಕು ವರ್ಷ ಆದರೂ ನೀರೇ ನಿಲ್ತಾ ಇಲ್ಲ. ತುಂಬಾ ಕಡೆ ಚಿಕಿತ್ಸೆ ತಗೊಂಡ್ವಿ, ಅತ್ತೆ ಮನೆಯವರು ಬೇಜಾರಾಗಿದ್ದಾರೆ, ನನಗೂ ಒಬ್ಬಳೇ ಮಗಳು ಮೊಮ್ಮಕ್ಕಳನ್ನು ಆಡಿಸುವ ಆಸೆ ಇದೆ. ಮಗು ಆಗುತ್ತೋ ಇಲ್ವೋ ಡಾಕ್ಟ್ರೇ?’ ಇದು ಸುನಂದಮ್ಮನ ಪ್ರಶ್ನೆ.

‘ನೀವು ಹೇಳಿದಂಗೆ ತೂಕಾನೂ ಕಡಿಮೆ ಮಾಡಿಕೊಂಡು, ಹಸಿರು ಸೊಪ್ಪು ತರಕಾರಿ ಎಲ್ಲಾ ಹೆಚ್ಚೆಚ್ಚು ತಿನ್ನುತ್ತಾ ಇದೀನಿ. ಮುಟ್ಟು ಸರಿಯಾಗಿ ಆಗ್ತಾ ಇಲ್ಲ. ಒಂದು ವೇಳೆ ಆದರೂ ತಿಂಗಳು ಗಟ್ಟಲೆ ಬ್ಲೀಡಿಂಗ್ ಹೋಗುತ್ತೆ, ಏನು ಮಾಡಲಿ ಮೇಡಂ?’ ಇದು ಯಶೋದಾ ಆತಂಕ.

‘ನನ್ನ ಮಗಳಿಗೆ ಮದುವೆಯಾಗಿ ಐದು ವರ್ಷ ಆಯಿತು. ಎರಡು ಸಾರಿ ಗರ್ಭಿಣಿಯಾಗಿದ್ದರೂ ಕೂಡ ಭ್ರೂಣ ಸರಿಯಾಗಿ ಬೆಳೆದಿಲ್ಲ ಅಂತಾ ಅಬಾರ್ಶನ್ ಮಾಡಿಬಿಟ್ಟರು. ಮುಂದೆ ಮಗು ಆಗ್ಬೋದಲ್ವಾ ಮೇಡಂ?’ ಇದು ಸರಸು ಕಳವಳ.

ಒಂದೇ? ಎರಡೇ? ದಿನನಿತ್ಯವು ಇಂತಹ ಹತ್ತುಹಲವು ಪ್ರಶ್ನೆಗಳನ್ನು ಎದುರಿಸುತ್ತಿರುವ ನಮ್ಮಂತಹ ಸ್ತ್ರೀರೋಗ ತಜ್ಞರಿಗೆ ಮನಸ್ಸಿನಾಳದಲ್ಲಿ ಹಲವು ಸಂದೇಹಗಳು ಸದಾ ಕಾಡುತ್ತಿರುತ್ತವೆ. ಸಾಲದ್ದಕ್ಕೆ ಹಿರಿಯ ಅನುಭವಸ್ತರು ನಮ್ಮ ಕಾಲದಲ್ಲಿ ಇಂತಹದ್ದೆಲ್ಲಾ ಇರ್ಲಿಲ್ಲಪ್ಪ, ಈಗ್ಯಾಕೆ ಹೀಗಾಗ್ತಿದೆಯೋ ಡಾಕ್ಟ್ರೇ ತಿನ್ನೋ ಆಹಾರಾನಾ? ವಾತಾವರಣವೇ? ಎಂದು ಅಳಲು ತೋಡಿಕೊಂಡಾಗ ಉತ್ತರ ಹೌದು ಎನ್ನುವುದೇ ಆಗಿರುತ್ತದೆ.

ಕೇವಲ ಮಹಿಳೆಯರಿಗಷ್ಟೇ ಅಲ್ಲಾ ಸ್ತ್ರೀ ಪುರುಷರಿಬ್ಬರ ಸಂತಾನೋತ್ಪತ್ತಿ ಸಾಮರ್ಥ್ಯವನ್ನು ಕಸಿದು ಆರೋಗ್ಯ ಹದಗೆಡಿಸುತ್ತಿರುವುದು ನಮ್ಮ ಪರಿಸರದಿಂದ ನಮ್ಮ ಶರೀರವನ್ನು ಸೇರುತ್ತಿರುವ ಕಲ್ಮಶಗಳು. ಮನುಷ್ಯರ ಆರೋಗ್ಯ ನೇರವಾಗಿ ಪರಿಸರದ ಆರೋಗ್ಯದೊಂದಿಗೆಸಂಬಂಧಪಟ್ಟಿದ್ದರೂ ಮನುಷ್ಯನ ಚಟುವಟಿಕೆಗಳು ಮಾತ್ರ ಪರಿಸರದ ಆರೋಗ್ಯಕ್ಕೆ ವಿಲೋಮಾನುಪಾತದಲ್ಲಿರುತ್ತವೆ.

ಕಳೆದ ದಶಕಗಳಲ್ಲಿ ಜನಸಂಖ್ಯಾ ಸ್ಫೋಟದಿಂದ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಹಲವು ರಾಸಾಯನಿಕಗಳನ್ನು ಎಗ್ಗಿಲ್ಲದೆ ಬಳಸಲಾಗುತ್ತಿದ್ದು ಅವು ಪರಿಸರದ ಆರೋಗ್ಯಕ್ಕೆ ದುಷ್ಪರಿಣಾಮ ಬೀರಿತ್ತು. ಇದರಿಂದ ಮನುಷ್ಯನಿಗಷ್ಟೇ ಅಲ್ಲಾ ಭೂಗ್ರಹದ ಬೇರೆ ಜೀವಚರಗಳ ಮೇಲೂ ದುಷ್ಪರಿಣಾಮಗಳು ಬೀರುತ್ತಿವೆ ಹಾಗೂ ಅವು ಮಾನವ ಶರೀರದ ಮೇಲೆ ಉಂಟುಮಾಡುತ್ತಿರುವ ದುಷ್ಪರಿಣಾಮಗಳ ಬಗ್ಗೆ ವೈಜ್ಞಾನಿಕ ಸಾಕ್ಷಿ ಪುರಾವೆಗಳು ಸಾಕಷ್ಟು ದೊರೆಯುತ್ತಿವೆ. ಅವುಗಳ ಪರಿಣಾಮ ಎಲ್ಲಾ ಅಂಗಗಳ ಮೇಲೂ ಆಗುತ್ತಿದ್ದು ಸಂತಾನೋತ್ಪತ್ತಿ ಅಂಗಗಳೂ ಇವುಗಳಿಂದ ಹೊರತಾಗಿಲ್ಲ.

ಇತ್ತೀಚಿನ ಅಧ್ಯಯನಗಳ ಪ್ರಕಾರ ಸ್ತ್ರೀ ಪುರುಷರಿಬ್ಬರಲ್ಲೂ ಸಂತಾನೋತ್ಪತ್ತಿ ಸಾಮರ್ಥ್ಯ ಕಡಿಮೆಯಾಗುತ್ತಿರುವುದಷ್ಟೇ ಅಲ್ಲ, ಅವು ಮುಂದಿನ ಜನಾಂಗಕ್ಕೂ ಬಳುವಳಿಯಾಗಿ ಬರುತ್ತಿದೆ. ಇದೇನು ಜನಸಂಖ್ಯಾ ಸ್ಫೋಟಕ್ಕೆ ಪರಿಸರದ ಸೇಡೆ? ಉತ್ತರ ಹೌದು. ಕಳೆದ ದಶಕಗಳಿಂದ ಮಾನವನ ಆಂತರಿಕ ಪರಿಸರದೊಂದಿಗೆ ಕುಳಿತುಣ್ಣುವ ಜೀವನಶೈಲಿ ಹಾಗೂ ಜಂಕ್‌ಫುಡ್ ಸೇವನೆಗಳಿಂದ ಬಾಹ್ಯ ಪರಿಸರದಲ್ಲೂ ಮಹತ್ತರ ಬದಲಾವಣೆಗಳನ್ನು ಎದುರಿಸಬೇಕಾಗಿದೆ. ಇವುಗಳಲ್ಲಿ ಕಣ್ಣಿಗೆ ಕಾಣುವ (ಗೋಚರ) ಅಪಾಯಕಾರಿ ವಸ್ತುಗಳು ಕೆಲವಾದರೆ (ಉದಾ: ಕಸದ ರಾಶಿಗಳು, ಕಟ್ಟಿಕೊಂಡ ಚರಂಡಿ, ಕಲುಶಿತ ನೀರು, ಅಸ್ಪಷ್ಟ ಹಾಗೂ ಮಂಜು ಮುಸುಕಿದ ಗಾಳಿ, ಸುತ್ತಲಿರುವ ಗದ್ದಲದ ಕಲುಶಿತ ವಾತಾವರಣಗಳು) ಇನ್ನು ಕೆಲವು ಅಗೋಚರವಾದ ಅಪಾಯಕಾರಿ ಅಂಶಗಳು (ಉದಾ: ಸಾವಯವ ದ್ರಾವಕಗಳು, ಭಾರದ ಲೋಹಗಳು, ಕೀಟನಾಶಕಗಳು, ಹಾರ್ಮೋನು ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ರಾಸಾಯನಿಕಗಳು– ಎಂಡೋಕ್ರೈನ್ ಡಿಸ್‌ರಪ್ಟರ್ಸ್ ಇತ್ಯಾದಿ)

ಮಹಿಳೆಯರಲ್ಲಂತೂ ಗರ್ಭಾವಸ್ಥೆಯಲ್ಲಿ ಇರುವಾಗ ಹೆಣ್ಣುಭ್ರೂಣದ ಮೇಲೆಯೇ ಇಂತಹ ರಾಸಾಯನಿಕಗಳ ಹಲವು ದುಷ್ಪರಿಣಾಮಗಳನ್ನು ಉಂಟುಮಾಡುತ್ತಿದೆ.

